**ದಿನಾಂಕಃ 11-08-2026 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದ**

9. ನಾನು ಮಾನ್ಯ ಜೆ ಎಮ್ ಎಫ್ ಸಿ ನ್ಯಾಯಾಲಯ ಹೊನ್ನಾವರಕ್ಕೆ ದಿಃ 26.12.2016 ರಂದು ಇನವೆಂಟರಿ ಮಾಡುವ ಕುರಿತು ಸಲ್ಲಿಸಿದ ಕೋರಿಕೆ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 17 ಎಂದು, ನಿಪಿ 17 ರಲ್ಲಿ ಸಾಕ್ಷಿಯು ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ 17(ಎ) ಎಂದು ಗುರುತಿಸಲಾಯಿತು. ಮಾನ್ಯ ನ್ಯಾಯಾಧೀಶರು ಜರುಗಿಸಿದ ಇನವೆಂಟರಿ ಕುರಿತು ನ್ಯಾಯಾಲಯದ ಆದೇಶದ ಪುಟದ ಪ್ರತಿಯನ್ನು ನಾನು ಈಗ ನೋಡುತ್ತಿದ್ದು ಅದನ್ನು ನಿಪಿ. 18 ಎಂದು, ನಿಪಿ 18 ರಲ್ಲಿ ಸಾಕ್ಷಿಯು ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ 18(ಎ) ಎಂದು ಗುರುತಿಸಲಾಯಿತು.

10. ದಿಃ 27.12.2016 ರಂದು ಈ ಪ್ರಕರಣದಲ್ಲಿ ಛಾಯಾಚಿತ್ರ ಹಾಗೂ ವಿಡಿಯೋಗ್ರಾಫಿ ಮಾಡಿದ ಸಿಬ್ಬಂದಿ ಚಾಸಾ 10 ರವರು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65 ಬಿ ರಡಿ ನೀಡಿದ ಪ್ರಮಾಣಪತ್ರವನ್ನು ಸ್ವೀಕರಿಸಿರುತ್ತೇನೆ. ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65 ಬಿ ರಡಿ ಚಾಸಾ 10 ರವರು ನೀಡಿದ ಪ್ರಮಾಣಪತ್ರವನ್ನು ನಾನು ಈಗ ನೋಡುತ್ತಿದ್ದು ಅದನ್ನು ನಿಪಿ. 19 ಎಂದು, ನಿಪಿ 19 ರಲ್ಲಿ ಸಾಕ್ಷಿಯು ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ 19(ಎ) ಎಂದು ಗುರುತಿಸಲಾಯಿತು. ಚಾಸಾ 10 ರವರು ನಿಪಿ. 19 ನ್ನು ಸಲ್ಲಿಸುವ ಕಾಲಕ್ಕೆ ಎರಡು ಸಿಡಿಗಳನ್ನು ಸಹಾ ನನ್ನ ಸಮಕ್ಷಮ ಹಾಜರುಪಡಿಸಿದ್ದು ಅವುಗಳನ್ನು ನಾನು ಸ್ವೀಕರಿಸಿರುತ್ತೇನೆ. ದಾಳಿಯ ಕಾಲಕ್ಕೆ ತೆಗೆದ ಛಾಯಾಚಿತ್ರಗಳ ಸಿಡಿಯನ್ನು ನಾನು ಈಗ ನೋಡುತ್ತಿದ್ದು ಅದನ್ನು ನಿಪಿ. 20 ಎಂದು, ಇನವೆಂಟರಿ ಕಾಲಕ್ಕೆ ತೆಗೆದ ಛಾಯಾಚಿತ್ರಗಳು ಇರುವ ಸಿಡಿಯನ್ನು ನಾನು ಈಗ ನೋಡುತ್ತಿದ್ದು ನಿಪಿ. 21 ಎಂದು ಗುರುತಿಸಲಾಯಿತು. ಅದೇ ದಿನ ಛಾಯಾಚಿತ್ರಗಳನ್ನು ಪ್ರಿಂಟ್ ಮಾಡಿಸಿಕೊಟ್ಟ ಚಾಸಾ 15 ರವರು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65 ಬಿ ರಡಿ ನೀಡಿದ ಪ್ರಮಾಣಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದ್ರಿ ಚಾಸಾ 15 ರವರು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65 ಬಿ ರಡಿ ನೀಡಿದ ಪ್ರಮಾಣಪತ್ರವನ್ನು ನಾನು ಈಗ ನೋಡುತ್ತಿದ್ದು

ಅದನ್ನು ನಿಪಿ 22 ಎಂದು, ನಿಪಿ 22 ರಲ್ಲಿ ಸಾಕ್ಷಿಯು ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ 22(ಎ) ಎಂದು ಗುರುತಿಸಲಾಯಿತು.

11. ದಿಃ 03.01.2017 ರಂದು ಜಪ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯ ಬೆಂಗಳೂರಿಗೆ ನಮ್ಮ ಠಾಣಾ ಸಿಬ್ಬಂದಿ ಚಾಸಾ 13 ರವರ ಜೊತೆ ಕೋರಿಕೆ ಪತ್ರದೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ಚಾಸಾ 13 ರವರು ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಸ್ಯಾಂಪಲ್ ಸ್ವತ್ತುಗಳನ್ನು ತಲುಪಿಸಿ ಅಲ್ಲಿಂದ ಸ್ವೀಕೃತಿ ಪಡೆದು ನನ್ನ ಸಮಕ್ಷಮ ಹಾಜರಾಗಿದ್ದು ಈ ಬಗ್ಗೆ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

12. ದಿಃ31.01.2017 ರಂದು ನಾನು ಹಾಗೂ ನನ್ನ ಸಿಬ್ಬಂದಿಗಳು 2 ಮತ್ತು 3 ನೇ ಆರೋಪಿತರ ಪತ್ತೆಯಲ್ಲಿರುವಾಗ 3 ನೇ ಆರೋಪಿತನು ನಮಗೆ ಭಟ್ಕಳದ ಗುಳುಮೆ ಕ್ರಾಸ್ ನಲ್ಲಿ ಸಿಕ್ಕಿದ್ದು ಆತನನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ ಹಿಂದಿರುಗಿ ಪ್ರಕರಣದ ಬಗ್ಗೆ ಆತನನ್ನು ವಿಚಾರಿಸಿ ಆತನ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡು ದಸ್ತಗಿರಿ ನಿಯಮಗಳನ್ನು ಪಾಲಿಸಿ ವೈದ್ಯಕೀಯ ಪರೀಕ್ಷೆ ಮಾಡಿಸಿ ಸಿಬ್ಬಂದಿಯ ಬೆಂಗಾವಲಿನಲ್ಲಿ ನ್ಯಾಯಾಂಗ ಬಂಧನದ ಕೋರಿಕೆ ಪತ್ರದೊಂದಿಗೆ ಮಾನ್ಯ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ನಾನು ದಸ್ತಗಿರಿ ಮಾಡಿದ 3 ನೇ ಆರೋಪಿ ಈಗ ನ್ಯಾಯಾಲಯದ ಮುಂದೆ ಹಾಜರು ಇರುತ್ತಾನೆ. ದಿಃ 13.02.2017 ರಂದು ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿತನು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಬಂದು ನನ್ನ ಸಮಕ್ಷಮ ಹಾಜರಾಗಿದ್ದು ಆತನ ವಿರುದ್ಧ ದಸ್ತಗಿರಿ ನಿಯಮ ಪಾಲಿಸಿರುತ್ತೇನೆ.

13. ದಿಃ 27.02.2017 ರಂದು 1 ನೇ ಆರೋಪಿ ವಾಸವಿದ್ದ ಮನೆಯ ದಾಖಲೆಗಳನ್ನು ನೀಡುವಂತೆ ಪಂಚಾಯತಿ ಅಭಿವೃದ್ದಿ ಅಧಿಕಾರಿ ಮುಟ್ಟಳ್ಳಿ ಗ್ರಾಮ ಪಂಚಾಯತಿ ರವರಿಗೆ ಕೋರಿಕೆ ಪತ್ರ ನೀಡಿರುತ್ತೇನೆ. ಸದ್ರಿ ಕೋರಿಕೆ ಪತ್ರವನ್ನು ನಿಪಿ. 23 ಎಂದು, ಸಾಕ್ಷಿಯ ಸಹಿಯನ್ನು ನಿಪಿ 23 ಎ ಎಂದು ಗುರುತಿಸಲಾಯಿತು. ಅದೇ ದಿನ ಜಪ್ತುಪಡಿಸಿಕೊಂಡ ಓಮಿನಿ ವಾಹನ ಸಂಖ್ಯೆ ಕೆಎ 03/ ಸಿ 770 ನೇ ದರ ಬಿ ಎಕ್ಸಟ್ರಾಕ್ಟ ಒಳಗಿಸುವಂತೆ ಮಾನ್ಯ ಸಾರಿಗೆ

ಅಧಿಕಾರಿ ಹೊನ್ನಾವರ ರವರಿಗೆ ಕೋರಿಕೊಂಡಿರುತ್ತೇನೆ. . ಸದ್ರಿ ಕೋರಿಕೆ ಪತ್ರವನ್ನು ನಿಪಿ. 24 ಎಂದು, ಸಾಕ್ಷಿಯ ಸಹಿಯನ್ನು ನಿಪಿ 24 ಎ ಎಂದು ಗುರುತಿಸಲಾಯಿತು.

14. ದಿಃ 03.03.2017 ರಂದು ಪಂಚಾಯತ ಅಬಿವೃದ್ದಿ ಅಧಿಕಾರಿ ಮುಟ್ಟಳ್ಳಿ ಗ್ರಾಮ ಪಂಚಾಯತಿ ರವರು 1 ನೇ ಆರೋಪಿಯ ಹೆಸರಿನಲ್ಲಿ ಯಾವದೇ ಮನೆ ಇರುವುದಿಲ್ಲ ಎಂದು ಲಿಖಿತವಾಗಿ ವರದಿಯನ್ನು ನೀಡಿದ್ದು ಅದನ್ನು ನಾನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದ್ರಿ ವರದಿಯನ್ನು ನಿಪಿ. 25 ಎಂದು, ಸಾಕ್ಷಿಯ ಸಹಿಯನ್ನು ನಿಪಿ 25 ಎ ಎಂದು ಗುರುತಿಸಲಾಯಿತು. ಈ ಬಗ್ಗೆ ಪಂಚಾಯತ ಅಬಿವೃದ್ದಿ ಅಧಿಕಾರಿ ಮುಟ್ಟಳ್ಳಿ ಗ್ರಾಮ ಪಂಚಾಯತಿ ರವರು ಜಮೀನು ತೆರಿಗೆಯ ನಿರ್ಧರಣಾ ಪಟ್ಟಿಯ ದೃಡೀಕೃತ ಪ್ರತಿಯನ್ನು ಸಲ್ಲಿಸಿರುತ್ತಾರೆ. ಆ ಪ್ರಕಾರ ನಾನು ದಾಳಿ ಮಾಡಿದ ಮನೆ ನಂಬರ್ 225 ಮಹಮ್ಮದ್ ಹುಸೇನ್ ಅಲ್ಲಾವುದ್ದೀನ್ ರವರ ಹೆಸರಿನಲ್ಲಿ ಇರುತ್ತದೆ. ಸದ್ರಿ ಜಮೀನು ತೆರಿಗೆಯ ನಿರ್ಧರಣಾ ಪಟ್ಟಿಯ ದೃಡೀಕೃತ ಪ್ರತಿಯನ್ನು ನಿಪಿ. 25/1 ಎಂದು ಗುರುತಿಸಲಾಯಿತು. ಅದೇ ದಿನ ಸಹಾಯಕ ಸಾರಿಗೆ ಅಧಿಕಾರಿ ಹೊನ್ನಾವರ ರವರು ಜಪ್ತುಪಡಿಸಿಕೊಂಡ ಓಮಿನಿ ವಾಹನ ಸಂಖ್ಯೆ ಕೆಎ 03/ ಸಿ 770 ದ ಬಿ ಎಕ್ಸಟ್ರಾಕ್ಟನ್ನು ಪೂರೈಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದ್ರಿ ದಾಖಲೆಯನ್ನು ನಿಪಿ 26 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 26 ಎ ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ ವಿಧಿವಿಜ್ಞಾನ ಪ್ರಯೋಗಾಲಯದಿಂದ ರಸಾಯನಿಕ ಪರೀಕ್ಷೆ ಬರುವುದನ್ನು ಬಾಕಿ ಇಟ್ಟು ಈವರೆಗೆ ಆದ ತನಿಖೆಯಿಂದ ಆರೋಪಿತರು ಕೃತ್ಯ ಎಸಗಿದ ಬಗ್ಗೆ ದಾಖಲೆಗಳಿಂದ ಪುರಾವೆಯಾಗಿದ್ದರಿಂದ ಆರೋಪಿತರ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

15. ದಿಃ 17.07.2017 ರಂದು ಎಫ ಎಸ್ ಎಲ್ ವರದಿಯನ್ನು ಸ್ವೀಕರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಸ್ವೀಕರಿಸಿದ ವರದಿಯನ್ನು ನಾನು ನೋಡುತ್ತಿದ್ದು ಅದನ್ನು ನಿಪಿ 27 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 27 ಎ ಎಂದು ಗುರುತಿಸಲಾಯಿತು. ನಾನು ಜಪ್ತುಪಡಿಸಿಕೊಂಡ ಮಾರುತಿ ಓಮಿನಿ ವಾಹನ ಸಂಖ್ಯೆ ಕೆಎ 03/ ಸಿ 770 ವನ್ನು ಈಗ ನ್ಯಾಯಾಲಯದ ಆವರಣದಲ್ಲಿ ನೋಡಿದ್ದು ಅದನ್ನು ಮು ಮಾ 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ. ಎ. ಎ.ವಕೀಲರಿಂದಃ**

16. ಎನ್ ಡಿ ಪಿ ಎಸ್ ಕಾಯ್ದೆಯ ಅಡಿ ತನಿಖೆ ಮಾಡಲು ಮತ್ತು ಮಾದಕ ವಸ್ತುಗಳನ್ನು ಜಪ್ತು ಮಾಡಲು ನನಗೆ ಕಾನೂನುಬದ್ದ ಅಧಿಕಾರ ಇರುವ ಕುರಿತಾಗಿ ನಾನು ಯಾವದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನಗೆ ಮಾದಕ ವಸ್ತುಗಳನ್ನು ಜಪ್ತು ಮಾಡಲು ಮತ್ತು ಎನ್ ಡಿ ಪಿ ಎಸ್ ಕಾಯ್ದೆಯ ಅಡಿ ತನಿಖೆ ಮಾಡಲು ಸದ್ರಿ ಕಾಯ್ದೆಯ ಪ್ರಕಾರ ಅಧಿಕಾರ ಇರುತ್ತದೆ, ಆದರೆ ಆ ಕುರಿತಾಗಿ ನಾನು ದಾಖಲೆಯನ್ನು ದೋಷಾರೋಪಣಾ ಪಟ್ಟಿಯೊಡನೆ ಹಾಜರು ಪಡಿಸಿಲ್ಲ ಎನ್ನುತ್ತಾರೆ. ಈ ಪ್ರಕಣದಲ್ಲಿ ದೂರುದಾರ ಮತ್ತು ತನಿಖಾಧಿಕಾರಿ ನಾನೊಬ್ಬನೇ ಆಗಿರುತ್ತೇನೆ. ಈ ಪ್ರಕರಣದಲ್ಲಿ ಪಿರ್ಯಾದುದಾರನಾದ ನಾನು ತನಿಖೆ ಮಾಡಲು ಮೇಲಾಧಿಕಾರಿಗಳಿಂದ ಅನುಮತಿ ಪಡೆದಿರುತ್ತೇನೆ. ಆ ರೀತಿ ಅನುಮತಿ ಪಡೆದ ಕುರಿತು ನಾನು ದೊಷಾರೋಪಣಾ ಪಟ್ಟಿಯೊಡನೆ ಯಾವದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ನಾನೇ ಈ ಪ್ರಕರಣದ ಪಿರ್ಯಾದುದಾರನಾದ ಕಾರಣ ನನ್ನ ಮೇಲಾಧಿಕಾರಿಗಳಿಗೆ ಅಥವಾ ಬೇರೆ ಅಧಿಕಾರಿಗಳಿಗೆ ಈ ಪ್ರಕರಣದಲ್ಲಿ ತನಿಖೆಯನ್ನು ನಡೆಸುವ ಸಲುವಾಗಿ ಕಡತವನ್ನು ಹಸ್ತಾಂತರಿಸಲು ನನಗೆ ಯಾವದೇ ತೊಂದರೆ ಇರಲಿಲ್ಲ.

17. ಎನ್ ಡಿ ಪಿ ಎಸ್ ಕಾಯ್ದೆಯ ಅಡಿಯಲ್ಲಿ ಮನೆ ಎನ್ನುವುದು ಖಾಸಗಿ ಸ್ಥಳದ ವ್ಯಾಖ್ಯಾನದಡಿ ಬರುತ್ತದೆ ಎಂದರೆ ಸರಿ. ಎನ್ ಡಿ ಪಿ ಎಸ್ ಕಾಯ್ದೆಯ ಅಡಿಯಲ್ಲಿ ಯಾವದೇ ಮಾಹಿತಿ ಬಂದಲ್ಲಿ ಅದನ್ನು ಪ್ರತ್ಯೇಕ ರೆಜಿಸ್ಟರಿನಲ್ಲಿ ನಮೂದು ಮಾಡಬೇಕು ಎಂದರೆ ಸರಿಯಲ್ಲ. ಎನ್ ಡಿ ಪಿ ಎಸ್ ಕಾಯ್ದೆಯ ಅಡಿಯಲ್ಲಿ ಯಾವದೇ ಮಾಹಿತಿ ಬಂದಲ್ಲಿ ಅದನ್ನು ಪ್ರತ್ಯೇಕ ರೆಜಿಸ್ಟರಿನಲ್ಲಿ ನಮೂದು ಮಾಡಬೇಕು ಎಂದು ನಿಯಮ ಇದ್ದರೂ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣಾ ದಿನಚರಿಯಲ್ಲಿ ಈ ಪ್ರಕಣದ ಕುರಿತಾಗಿ ಮಾಹಿತಿಯನ್ನು ನಾನು ನಮೂದು ಮಾಡಿರುತ್ತೇನೆ. ದಾಳಿಗೆ ಹೋಗುವ ಪೂರ್ವದಲ್ಲಿ ನಾನು ಠಾಣಾ ದಿನಚರಿಯ ಪ್ರತಿಯನ್ನು ಮೇಲಾಧಿಕಾರಿಗಳಿಗೆ ಕಳುಹಿಸಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನನಗೆ ಯಾವದೇ ಅನಾಮಧೇಯ ದೂರವಾಣಿ ಕರೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ಕರೆಯಲ್ಲಿ ಭಟ್ಕಳದ ಗುಳಮೆ ಊರಿನ ಶ್ರೀಮತಿ ಬಿಬಿ ನಪೀಸಾ, ಮೊಹಮ್ಮದ್ ಹುಸೇನ್ ಸೈಯದ್ ಹಾಗೂ ಫಾತೀಮಾ ಸೈಯದ್ ಅಬ್ದುಲ್ಲಾ ರವರು

ಗಾಂಜಾವನ್ನು ಮಾರಾಟ ಮಾಡುವ ಉದ್ದೇಶದಿಂದ ತಮ್ಮ ತಮ್ಮ ಮನೆಗಳಲ್ಲಿ ಶೇಖರಣೆ ಮಾಡಿದ್ದಾರೆ ಎಂದು ನನಗೆ ಬಾತ್ಮಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಾಳಿಗೆ ಹೋಗುವ ಪೂರ್ವದಲ್ಲಿ ಮೆಜಿಸ್ಟ್ರೇಟ್ ರವರಿಂದ ಸರ್ಚ ವಾರಂಟ್ ನ್ನು ಯಾಕೆ ಪಡೆದಿಲ್ಲ ಎಂಬ ಬಗ್ಗೆ ನಿರ್ದಿಷ್ಟ ಕಾರಣವನ್ನು ದೂರಿನಲ್ಲಾಗಲಿ ಅಥವಾ ಪಂಚನಾಮೆಯಲ್ಲಾಗಲಿ ನಾನು ನಮೂದು ಮಾಡಿಲ್ಲ ಎಂದರೆ ಸರಿ.

18. ಚಾಸಾ 17 ರವರ ಕಛೇರಿ ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯಿಂದ 1 ಕಿ ಮೀ ದೂರ ಇರುತ್ತದೆ. ಚಾಸಾ 17 ರವರಿಗೆ ನೋಟಿಸು ನೀಡಿದ ಸಿಬ್ಬಂದಿಯ ಹೆಸರು ನನಗೆ ಈಗ ನೆನಪಿಲ್ಲ. ನಿಪಿ 6 ದೂರು ಮತ್ತು ನಿಪಿ 4 ಪಂಚನಾಮೆಯಲ್ಲಿ ಚಾಸಾ 17 ರವರಿಗೆ ನನ್ನ ಸಿಬ್ಬಂದಿ ಸಂಜೆ 7 ಗಂಟೆಗೆ ಕಛೇರಿಯಲ್ಲಿ ಜಾರಿ ಮಾಡಿದ್ದರು ಎಂದು ನಮೂದು ಇರುತ್ತದೆ. ಭಟ್ಕಳ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ ಸಂಜೆ 5.30 ಗಂಟೆಗೆ ಮುಚ್ಚುತ್ತದೆ ಎಂದರೆ ಸರಿಯಲ್ಲ. ಯಾವದೇ ಸರ್ಕಾರಿ ಕಛೇರಿ 5.30 ಗಂಟೆಗೆ ಮುಚ್ಚಲ್ಪಡುತ್ತಿದ್ದರೂ ಚಾಸಾ 17 ರವರಿಗೆ ನನ್ನ ಸಿಬ್ಬಂದಿ ಸಂಜೆ 7 ಗಂಟೆಗೆ ಕಛೇರಿಯಲ್ಲಿ ನೋಟಿಸನ್ನು ಜಾರಿ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 17 ರವರಿಗೆ ನಾನು ಸಿಬ್ಬಂದಿ ಮೂಲಕ ಯಾವದೇ ನೋಟಿಸನ್ನು ಜಾರಿ ಮಾಡಿಲ್ಲ ಮತ್ತು ಚಾಸಾ 17 ರವರು ದಾಳಿಯ ಕಾಲಕ್ಕೆ ನನ್ನ ಜೊತೆ ಬಂದಿರಲಿಲ್ಲ ಎಂದರೆ ಸರಿಯಲ್ಲ.

19. ಚಾಸಾ 2 ಮತ್ತು 3 ರವರ ಮನೆಗಳು ಭಟ್ಕಳ ಗ್ರಾಮೀಣ ಪೋಲೀಸ್ ಠಾಣೆಯಿಂದ ಅಂದಾಜು 1-2 ಕಿ ಮೀ ದೂರ ಇರುತ್ತದೆ. ನಾನು ದಾಳಿ ಮಾಡಿದೆ ಎಂದು ಹೇಳಲಾದ ಮನೆಯ ಸುತ್ತಮುತ್ತಲೂ 40-50 ಮನೆಗಳು ಇರುತ್ತವೆ. ಸದ್ರಿ ಮನೆಯಿಂದ 500 ಮೀಟರ್ ದೂರದಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜು ಇರುತ್ತದೆ ಎಂದರೆ ಸರಿ. ಸದ್ರಿ ಇಂಜಿನಿಯರಿಂಗ್ ಕಾಲೇಜಿನ ಡೈರೆಕ್ಟರ್ ಮತ್ತು ಪ್ರಾಂಶುಪಾಲರ ಮನೆ ನಾನು ದಾಳಿ ಮಾಡಿದ್ದೆ ಎಂದು ಹೇಳಲಾದ ಮನೆಯಿಂದ 500 ಮೀ ದೂರದಲ್ಲಿ ಇರುತ್ತದೆ. ಸದ್ರಿ ಕಾಲೇಜಿನ ಡೈರೆಕ್ಟರ್ ಮತ್ತು ಪ್ರಾಂಶುಪಾಲರು ಪತ್ರಾಂಕಿತ ಅಧಿಕಾರಿಗಳಾಗಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ನಾನು ದಾಳಿ ಮಾಡಿದೆ ಎಂದು ಹೇಳಲಾದ ಮನೆಯ ಸುತ್ತಮುತ್ತಲಿನ ನಿವಾಸಿಗಳನ್ನು ಪಂಚರನ್ನಾಗಿ ಪಂಚನಾಮೆಯ ವೇಳೆ ಕರೆಸಲು ನನಗೆ ತೊಂದರೆ ಇರಲಿಲ್ಲ. ಚಾಸಾ 2 ಮತ್ತು 3 ಭಟ್ಕಳ

ಗ್ರಾಮೀಣ ಪೊಲೀಸ್ ಠಾಣೆಯ ಖಾಯಂ ಪಂಚರಾಗಿದ್ದು ಅವರ ಸಹಿಗಳನ್ನು ನಾನು ನಿಪಿ. 4 ಕ್ಕೆ ಭಟ್ಕಳ ಗ್ರಾಮೀಣ ಪೊಲಿಸ್ ಠಾಣೆಯಲ್ಲಿ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ.

20. ನಾನು ದಾಳಿಗೆ ಇಲಾಖಾ ವಾಹನದಲ್ಲಿ ಹೋದ ಕುರಿತಾಗಿ ಲಾಗ್ ಬುಕ್ ನ ಪ್ರತಿಯನ್ನು ನಾನು ದೋಷಾರೋಪಣಾ ಪಟ್ಟಿಯೊಡನೆ ಸಲ್ಲಿಸಿರುವುದಿಲ್ಲ. ಚಾಸಾ 4 ರಿಂದ 12 ರವರು ದಾಳಿಯ ಕಾಲಕ್ಕೆ ಬಂದಿದ್ದರು ಎಂದು ತೋರಿಸಲು ನಾನು ಠಾಣಾ ದಿನಚರಿಯ ಪ್ರತಿಯನ್ನು ದೋಷಾರೋಪಣಾ ಪಟ್ಟಿಯೊಡನೆ ಸಲ್ಲಿಸಿಲ್ಲ ಎಂದರೆ ಸರಿ. ನನಗೆ ಸದ್ರಿ ಲಾಗ್ ಬುಕ್ ಮತ್ತು ಠಾಣಾ ದಿನಚರಿಯ ಪ್ರತಿಗಳನ್ನು ಹಾಜರುಪಡಿಸಲು ಯಾವದೇ ತೊಂದರೆ ಇರಲಿಲ್ಲ. ನಾನು ಪತ್ರಾಂಕಿತ ಅಧಿಕಾರಿಗಳಿಗೆ, ಪಂಚರಿಗೆ ಯಾವದೇ ನೋಟಿಸನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ. 1 ರಿಂದ 3 ನ್ನು ನಾನು ಸುಳ್ಳಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

21. ನಾನು ದಾಳಿ ಮಾಡಿದ ಮನೆ 1 ನೇಆರೋಪಿಗೆ ಸೇರಿದ್ದು ಎಂದು ಸಾಭೀತು ಪಡಿಸಲು ಯಾವದೇ ದಾಖಲೆಗಳನ್ನು ನಾನು ದೋಷಾರೋಪಣಾ ಪಟ್ಟಿಯೊಡನೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನಾನು ಪಂಚಾಯತ ಅಭಿವೃದ್ದಿ ಅಧಿಕಾರಿ ಗ್ರಾಮ ಪಂಚಾಯತ ಮುಟ್ಟಳ್ಳಿ ರವರಿಗೆ ದಾಖಲೆ ನೀಡುವಂತೆ ಕೋರಿದ್ದು ಸದ್ರಿ ಪಂಚಾಯತ ಅಭಿವೃದ್ದಿ ಅಧಿಕಾರಿರವರು ನಿಪಿ 25 ರಂತೆ 1 ನೇ ಆರೋಪಿಯ ಹೆಸರಿನಲ್ಲಿ ಯಾವದೇ ಸ್ಥಿರ ಆಸ್ತಿ ಇರುವುದಿಲ್ಲ ಎಂದು ಹಿಂಬರಹವನ್ನು ನೀಡಿರುತ್ತಾರೆ ಎನ್ನುತ್ತಾರೆ. ನಿಪಿ. 4 ಮತ್ತು 6 ರಲ್ಲಿ ನಮೂದಿಸಿದ ಮನೆಗೂ 1 ನೇ ಆರೋಪಿಗೂ ಯಾವದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

22. ದಾಳಿ ಮಾಡಿದೆ ಎಂದು ಹೇಳುವ ಸಮಯ ನಾನು ಯಾವದೇ ನಕಾಶೆಯನ್ನು ತಯಾರು ಮಾಡಿರುವುದಿಲ್ಲ. ದಾಳಿ ಮಾಡಲಾಯಿತು ಎನ್ನಲಾದ ಸಮಯ ನನ್ನ ಬಳಿ ಮತ್ತು ನನ್ನ ಸಿಬ್ಬಂದಿಗಳ ಬಳಿ ಸ್ಮಾರ್ಟ ಪೋನ್‌ಗಳು ಇದ್ದವು. ದಾಳಿಯ ಸಮಯ ಸ್ಮಾರ್ಟ ಪೋನುಗಳ ಮೂಲಕ ಪೊಟೋ ತೆಗೆಯಲು ಮತ್ತು ವಿಡಿಯೋ ಚಿತ್ರೀಕರಣ ಮಾಡಲು ಯಾವದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ನಿಪಿ 4 ಮತ್ತು 6 ರಲ್ಲಿ ನಮೂದಿಸಿದ ಮನೆಗೆ ದಾಳಿ ಮಾಡಿಲ್ಲ, ಆದ ಕಾರಣ ನಾನು ನಕಾಶೆಯನ್ನು ತಯಾರು ಮಾಡಿಲ್ಲ ಮತ್ತು ದಾಳಿಯ ಕಾಲಕ್ಕೆ ಪೊಟೋ ತೆಗೆದಿಲ್ಲ ಮತ್ತು ವಿಡಿಯೋ ಚಿತ್ರೀಕರಣ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 2,

ಚಾಸಾ 3 ಮತ್ತು 17 ರವರ ಸಮಕ್ಷಮ 1 ನೇ ಆರೋಪಿಯನ್ನು ವಿಚಾರಣೆ ಮಾಡಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ಒಪ್ಪಿಗೆಯ ಮೇರೆಗೆ ಮನೆಯನ್ನು ಪರಿಶೀಲನೆ ಮಾಡಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ಎನ್ ಡಿ ಪಿ ಎಸ್ ಕಾಯ್ದೆಯ ಅಡಿಯಲ್ಲಿ ಇರುವ ಗಾಂಜಾ ವ್ಯಾಖ್ಯಾನವನ್ನು ನಾನು ಓದಿರುತ್ತೇನೆ. ಗಾಂಜಾ ಗಿಡದ ಯಾವ ಭಾಗ ನಿಶೇಧಿತವಾಗಿರುತ್ತದೆ ಎಂದರೆ ಸಾಕ್ಷಿ ಎಲ್ಲಾ ಭಾಗಗಳು ನಿಶೇಧಿತವಾಗಿರುತ್ತವೆ ಎನ್ನುತ್ತಾರೆ. ಮು ಮಾ 1 ರಿಂದ 4 ಗಾಂಜಾ ಅಲ್ಲ ಎಂದರೆ ಸರಿಯಲ್ಲ. ಮು ಮಾ 1 ರಿಂದ 4 ಕ್ಕೂ ಆರೋಪಿತರಿಗೂ ಯಾವದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ಮನೆಯಿಂದ ಗಾಂಜಾವನ್ನು ಜಪ್ತು ಮಾಡಲಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. ಡಿಜಿಟಲ್ ತಕ್ಕಡಿ ಯಾರಿಗೆ ಸೇರಿದ್ದು ಮತ್ತು ಅದು ಸುಸ್ಥಿತಿಯಲ್ಲಿ ಇತ್ತು ಎಂಬ ಬಗ್ಗೆ ನಿಪಿ. 4 ಪಂಚನಾಮೆಯಲ್ಲಿ ನಮೂದು ಇಲ್ಲ ಎಂದರೆ ಸರಿ. 1 ನೇ ಆರೋಪಿಯ ಮನೆಯಿಂದ ಚೀಲ ಸಮೇತ 3 ಕೆ ಜಿ 800 ಗ್ರಾಂ ಗಾಂಜಾವನ್ನು ಜಪ್ತು ಮಾಡಲಾಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಯಾವ ಪ್ಯಾಕೇಟುಗಳಿಂದ ಎಷ್ಟು ಎಷ್ಟು ಮಾದರಿ ಗಾಂಜಾಗಳನ್ನು ತೆಗೆಯಲಾಗಿತ್ತು ಎಂದು ನಿಪಿ. 4 ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸ್ಥಳದಲ್ಲಿ ನಾನು ಗಾಂಜಾ ಮಾದರಿಯನ್ನು ಸಂಗ್ರಹಿಸಿರುವುದಿಲ್ಲ, ಆ ಕಾರಣಕ್ಕಾಗಿ ಯಾವ ಯಾವ ಪ್ಯಾಕೇಟುಗಳಿಂದ ಎಷ್ಟು ಎಷ್ಟು ಮಾದರಿ ಗಾಂಜಾಗಳನ್ನು ತೆಗೆಯಲಾಗಿತ್ತು ಎಂಬ ಬಗ್ಗೆ ನಿಪಿ. 4 ಪಂಚನಾಮೆಯಲ್ಲಿ ನಾನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಎನ್ ಡಿ ಪಿ ಎಸ್ ಕಾಯ್ದೆಯಡಿಯಲ್ಲಿ ಮಾದಕ ವಸ್ತುವನ್ನು ವಶಕ್ಕೆ ಪಡೆದ ನಂತರ ಅದನ್ನು ಠಾಣಾಧಿಕಾರಿ ಸುಪರ್ದಿಗೆ ನೀಡಬೇಕು ಎಂದರೆ ಸಾಕ್ಷಿ ಆ ಸಮಯ ನಾನೇ ಠಾಣಾಧಿಕಾರಿಯಾಗಿದ್ದೆ ಎನ್ನುತ್ತಾರೆ. ಠಾಣಾಧಿಕಾರಿಗೆ ಪ್ರತ್ಯೇಕ ಸೀಲು ಇರುತ್ತದೆ ಎಂದರೆ ಸರಿ. ಮಾದಕ ವಸ್ತುವನ್ನು ವಶಕ್ಕೆ ಪಡೆದ ಠಾಣಾಧಿಕಾರಿ ಅದರ ಮೇಲೆ ಕೌಂಟರ್ ಸೀಲ್ ಹಾಕಬೇಕು ಎಂದರೆ ಸರಿ. ಮು ಮಾ 1 ರಿಂದ 4 ರ ಮೇಲೆ ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯ ಠಾಣಾಧಿಕಾರಿಯ ಸೀಲು ಇಲ್ಲ ಎಂದರೆ ಸರಿಯಲ್ಲ. ಎಸ್ ಎಚ್ ಓ ಭಟ್ಕಳ ಎಂಬ ಮೊಹರನ್ನು ಮು ಮಾ 1 ರಿಂದ 4 ರ ಮೇಲೆ ನಾನು

ಹಾಕಿರುವುದಿಲ್ಲ.  ಮು ಮಾ 1 ರಿಂದ 4 ನನ್ನ ಸುಪರ್ದಿಯಲ್ಲಿ ಇತ್ತು ಎಂಬ ಬಗ್ಗೆ ಬಾಯಿ ಮಾತಿನ ಹೇಳಿಕೆ ಬಿಟ್ಟರೆ ಬೇರೆ ಯಾವದೇ ದಾಖಲಾತಿ ಇಲ್ಲ ಎಂದರೆ ಸಾಕ್ಷಿ ಠಾಣೆಯಲ್ಲಿರುವ ಮುದ್ದೆಮಾಲು ರೆಜಿಸ್ಟರಲ್ಲಿ ಆ ಬಗ್ಗೆ ನಾನು ನಮೂದು ಮಾಡಿರುತ್ತೇನೆ ಎನ್ನುತ್ತಾರೆ. ಠಾಣೆಯಲ್ಲಿರುವ ಮುದ್ದೆಮಾಲು ರೆಜಿಸ್ಟರಿನ ಸಂಬಂಧಿಸಿದ ಪ್ರತಿಯನ್ನು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯೊಡನೆ ಸಲ್ಲಿಸಲು ನನಗೆ ಯಾವದೇ ತೊಂದರೆ ಇರಲಿಲ್ಲ.

25. ನಾನು ಹಾಗೂ ಚಾಸಾ 17 ಸೇರಿ 1 ನೇ ಆರೋಪಿತಳಿಗೆ ಸದ್ರಿ ಗಾಂಜಾವನ್ನು ಎಲ್ಲಿಂದ ತಂದು ಯಾರಿಗೆ ಮಾರಾಟ ಮಾಡುತ್ತೀಯಾ ಎಂದು ವಿಚಾರಿಸಿದಾಗ ಆಕೆ ಅದನ್ನು ತನ್ನ ಮಾರುತಿ ಓಮಿನಿ ವಾಹನದ ಮೇಲೆ ತರುತ್ತಿದ್ದ ಬಗ್ಗೆ ತಿಳಿಸಿದ್ದಳು ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.  ನಿಪಿ. 4 ರಂತೆ ನಾನು ಯಾವದೇ ಪಂಚನಾಮೆ ಮಾಡಿಲ್ಲ ಮತ್ತು ಆ ಸಮಯ ಯಾವದೇ ಛಾಯಾಚಿತ್ರವನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.  ನಿಪಿ 4 ರಿಂದ 6 ನ್ನು ನಾನು ಠಾಣೆಯಲ್ಲಿಯೇ ಸುಳ್ಳು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.  ನಿಪಿ 7 ರಿಂದ 9 ನ್ನು ಸುಳ್ಳು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.  ನಾನು ನಿಪಿ 10 ರಂತೆ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.   1 ನೇ ಆರೋಪಿ ನನ್ನ ಮುಂದೆ ಯಾವದೇ ಸ್ವಖುಷಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.  ರಿಮಾಂಡ್ ಯಾದಿಯಲ್ಲಿ ಮತ್ತು ಅರೆಸ್ಟ ಮೆಮೊದಲ್ಲಿ 1 ನೇ ಆರೋಪಿಗೆ ದಸ್ತಗಿರಿ ಮಾಡುವ ಕಾರಣವನ್ನು ತಿಳಿಸಿದ ಬಗ್ಗೆ ಎಲ್ಲೂ ನಮೂದು ಇಲ್ಲ ಎಂದರೆ ಸರಿಯಲ್ಲ.   ಆ ರೀತಿ ರಿಮಾಂಡ್ ಯಾದಿಯಲ್ಲಿ ಮತ್ತು ಅರೆಸ್ಟ ಮೆಮೊದಲ್ಲಿ ನಮೂದು ಇಲ್ಲದೇ ಇದ್ದರೂ ಇದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ಯಾವದೇ ದಸ್ತಗಿರಿ ನಿಯಮವನ್ನು ಪಾಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವದೇ ಸಿಬ್ಬಂದಿಗಳ ಹೇಳಿಕೆಗಳನ್ನು ಪಡೆದಿಲ್ಲ ಮತ್ತು ನಾನು ಯಾವದೇ ಮರು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

26.  ದಿಃ 18.12.2016 ರಿಂದ ದಿಃ 26.12.2016 ರವರೆಗೆ ಈ ಪ್ರಕರಣದಲ್ಲಿ ಜಪ್ತು ಮಾಡಲಾಗಿರುತ್ತದೆ ಎಂದು ಹೇಳುವ ಗಾಂಜಾ ಯಾರ ಸುಪರ್ದಿಯಲ್ಲಿ ಇತ್ತು ಎಂಬ ಬಗ್ಗೆ ಯಾವದೇ ದಾಖಲಾತಿಗಳನ್ನು ನಾನು ದೋಷಾರೋಪಣಾ ಪಟ್ಟಿಯೊಡನೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಪ್ರಕಾರ ಇನವೆಂಟರಿಯನ್ನು ಹೊನ್ನಾವರ ಪ್ರಥಮ ದರ್ಜೆ ನ್ಯಾಯಾಧೀಶರು

ಮಾಡಿರುತ್ತಾರೆ. ಎನ್ ಡಿ ಪಿ ಎಸ್ ಕಾಯ್ದೆಯ ಪ್ರಕಾರ ಇನವೆಂಟರಿಯನ್ನು ತನಿಖಾಧಿಕಾರಿ ಮಾಡಬೇಕು ಮೆಜಿಸ್ಟ್ರೇಟ್ ಅದನ್ನು ಸರ್ಟಿಫೈ ಮಾತ್ರ ಮಾಡಬೇಕು ಎಂದು ನಿಯಮ ಇರುತ್ತದೆ ಎಂದರೆ ಸರಿಯಲ್ಲ. ಆ ರೀತಿ ನಿಯಮ ಇದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎನ್ ಡಿ ಪಿ ಎಸ್ ಕಾಯ್ದೆಯಡಿಯಲ್ಲಿ ಕ್ವಾಂಟ್ರಾ ಬ್ಯಾಂಡಿನ ಕ್ವಾಲಿಟಿ , ಕ್ವಾಂಟಿಟಿ ಮತ್ತು Descreption ನ್ನು ನಿಗಧಿತ ನಮೂನೆಯಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ಆ ರೀತಿ ನಿಗಧಿತ ನಮೂನೆಯಲ್ಲಿ ನಮೂದು ಮಾಡಬೇಕು ಎಂದು ನಿಯಮ ಇದ್ದರೂ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇನವೆಂಟರಿ ಕಾಲಕ್ಕೆ ತೆಗೆದ ಫೋಟೋವನ್ನು ನ್ಯಾಯಾಧೀಶರಿಂದ ಸರ್ಟಿಫೈ ಮಾಡಿಸಿರುವುದಿಲ್ಲ. ದೋಷಾರೋಪಣಾ ಪಟ್ಟಿಯೊಡನೆ ಸಲ್ಲಿಸಲಾದ ಇನವೆಂಟರಿ ಎನ್ ಡಿ ಪಿ ಎಸ್ ಕಾಯ್ದೆಗೆ ಪೂರಕವಾಗಿ ಇಲ್ಲ ಎಂದರೆ ಸರಿಯಲ್ಲ. ಆ ಕಾರಣ ಸದ್ರಿ ಇನವೆಂಟರಿಗೆ ಕಾನೂನಿನ ಪ್ರಕಾರ ಯಾವದೇ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ಇನವೆಂಟರಿ ಸಮಯದಲ್ಲಿ ಯಾವ ಯಾವ ಪ್ಯಾಕೇಟುಗಳಿಂದ ಎಷ್ಟೆಷ್ಟು ಗಾಂಜಾಗಳನ್ನು ಮಾದರಿಯಾಗಿ ತೆಗೆಯಲಾಗಿತ್ತು ಎಂಬ ಬಗ್ಗೆ ನಿಪಿ 17 ಇನಮೆಂಟರಿಯಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ. 11 ರಿಂದ 16 ಫೋಟೋಗಳಲ್ಲಿ ಎಲ್ಲೂ ಗಾಂಜಾ ಕಾಣುವುದಿಲ್ಲ ಎಂದರೆ ಸರಿಯಲ್ಲ.

27. ದಿಃ 03.01.2017 ರವರೆಗೆ ಮು ಮಾ 1 ರಿಂದ 4 ಯಾರ ತಾಬಾದಲ್ಲಿ ಇತ್ತು ಎಂಬ ಬಗ್ಗೆ ಯಾವದೇ ದಾಖಲೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಯಾವದೇ ಮುದ್ದೆಮಾಲುಗಳನ್ನು ನಾನು ವಿಧಿ ವಿಜ್ಞಾನ ಪ್ರಯೋಗಾಲಯ ಬೆಂಗಳೂರಿಗೆ ಕಳುಹಿಸಿಲ್ಲ ಮತ್ತು ವಿಧಿ ವಿಜ್ಞಾನ ಪ್ರಯೋಗಾಲಯ ಬೆಂಗಳೂರಿನಿಂದ ನಾನು ಯಾವದೇ ವರದಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ. 6 ದೂರಿನಲ್ಲಿ ಮತ್ತು ನಿಪಿ 4 ಪಂಚನಾಮೆಯಲ್ಲಿ ದಾಳಿ ಮಾಡಿದೆ ಎಂದು ಹೇಳುವ ಮನೆಯ ಡೋರ್ ನಂಬರ್ ಮತ್ತು ಸದ್ರಿ ಮನೆ ಇರುವ ಜಾಗದ ಸರ್ವೆ ನಂಬರ್ ಎಲ್ಲೂ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ. 27 ನ್ನು ಸುಳ್ಳು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿಗೂ ಈ ಪ್ರಕರಣಕ್ಕೂ ಯಾವದೇ ಸಂಬಂಧ ಇಲ್ಲದೇ ಇದ್ದರೂ 1 ನೇ ಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಜಿ ಟಿ ಎನ್ ವಕೀಲರಿಂದಃ**

28. 1 ನೇ ಆರೋಪಿಯನ್ನು ವಿಚಾರಿಸಿದಾಗ ಆಕೆ ತಾನು 2 ಮತ್ತು 3 ನೇ ಆರೋಪಿತರಿಂದ ಗಾಂಜಾ ಖರೀದಿಸಿ ಅದನ್ನು ಮಾರಾಟ ಮಾಡುತ್ತಿದ್ದೆ ಎಂದು ಹೇಳಿರುತ್ತಾಳೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರಿಂದ ನಾನು ಯಾವದೇ ಮಾದಕ ವಸ್ತುಗಳನ್ನು ವಶಪಡಿಸಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಸ್ವಖುಷಿ ಹೇಳಿಕೆಗಳನ್ನು ಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

Sd/-

(ಪರಮೇಶ್ವರ ಪ್ರಸನ್ನ ಬಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ